ಊ) ಬೆಲೆ ಸೂಚ್ಯಂಕ ಹಾಗೂ ಆಹಾರ ಪದಾರ್ಥಗಳ ಬೆಲೆಗಳನ್ನು ಅನುಸರಿಸಿ ಹೆಚ್ಚುವರಿ ಊಟ ವಸತಿಯ ವೆಚ್ಚ ಹಾಗೂ ಭಾರತ ಸರ್ಕಾರದ ವಿದ್ಯಾರ್ಥಿವೇತನ ಸೇರಿದಂತೆ ೩೦೦–೦೦ ರೂ.ಗಳಿಗೆ ಹೆಚ್ಚಿಸುವುದನ್ನು ಸರ್ಕಾರವು ಪರಿಗಣಿಸುವುದೆ ?

ಶ್ರೀ ಜಿ. ಬಸವಣ್ಣಪ್ಪ, (ಸಮಾಜ ಕಲ್ಯಾಣ ಸಚಿವರು).—

ಅ) ಮಾಹೆಯಾನ ರೂ ೧೫೦–೦೦ ಪ್ರತಿ ವಿದ್ಯಾರ್ಥಿಗೆ (ಭಾರತ ಸರ್ಕಾರದ ವಿದ್ಯಾರ್ಥಿವೇತನವೊ ಸೇರಿದಂತೆ)

ಆ) ಜೀವನ ವೆಚ್ಚವನ್ನಾಧರಿಸಿ ಈಗಿನ ದರಗಳು ೧–೧೨–೧೯೮೧ರಿಂದ ಜಾರಿಯಲ್ಲಿವೆ.

ಇ) ಹೌದು.

ಈ) ಹೌದು.

ಉ) ಹೆಚ್ಚುವರಿ ಊಟದ ಮತ್ತು ವಸತಿ ವೆಚ್ಚವನ್ನು ಭಾರತ ಸರ್ಕಾರದ ವಿದ್ಯಾರ್ಥಿವೇತನ್ನೊಳಗೊಂಡಂತೆ ರೂ ೧೫೦–೦೦ರಿಂದ ೨೫೦–೦೦ ರೂ.ಗಳಿಗೆ ಹಚ್ಚಿಸುವ ವಿಚಾರ ಪರಿಶೀಲನೆಯಲ್ಲಿದೆ.

ಊ) ''ಉ'' ಉಪ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಾಗರ ತಾಲ್ಲೂಕು ಆನಂದಪುರ ಹೋಬಳಿ ಎಡೇಹಳ್ಳಿ ಗ್ರಾಮದ ಸರ್ವೆ ನಂ. ೪೧ ರಲ್ಲಿ ಭೂ ಮಂಜೂರಾತಿ.

೧೩೫೧ (೨೬೧೨) ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕಂದಾಯ, ಯೋಜನೆ ಮತ್ತು ಭಾರಿ, ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸಾಗರ ತಾಲ್ಲೂಕು ಆನಂದಪುರ ಹೋಬಳಿ ಎಡೇಹಳ್ಳಿ ಗ್ರಾಮದ ಸರ್ವೆ ನಂ. ೪೧ ಕ್ಕೆ ಸಂಬಂಧಿಸಿದ ಜಮೀನನ್ನು ಸರ್ಕಾರದಿಂದ ದಿನಾಂಕ: ೨-೪-೧೯೫೬ ರೀತ್ಯ ೩ ಜನ ಹರಿಜನರಿಗೆ ಮಂಜೂರು ಮಾಡಲಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ಮೇಲ್ಕಂಡ ಜಮೀನಿನ ಸ್ವಾಧೀನಾನುಭವವು ಮಂಜೂರಿದಾರರ ಹತ್ತಿರ ವಿದೆಯೇ ?

ಇ) ಹಾಗಿದ್ದಲ್ಲಿ, ಈ ಮೇಲ್ಕಂಡ ಜಮೀನನ್ನು ಕಂದಾಯ ಇಲಾಖೆಯವರು ಮಂಜೂರಿಯಾದ ೧೫ ವರ್ಷದೊಳಗಾಗಿ ಬಹಿರಂಗ ಹರಾಜ್ ಮಾಡಿ ಹರಿಜನರ ಹಕ್ಕನ್ನು ಮೊಟಕು ಮಾಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದಲ್ಲಿ ಜಮೀನು ಹರಾಜು ಮಾಡಿರುವ ಅಧಿಕಾರವರ್ಗದವರ ಮೇಲೆ ಸರ್ಕಾರವು ಕ್ರಮವನ್ನು ಕೈಗೊಳ್ಳುವುದೇ ?

ಉ) ಸರ್ಕಾರವು ಈ ಮೇಲ್ಕಂಡ ಜಮೀನನ್ನು ಮಂಜೂರಿದಾರರಿಗೆ ಬಿಡಿಸಿಕೊಡುವ ಬಗ್ಗೆ ಕ್ರಮವನ್ನು ಕೈಗೊಂಡಿದೆಯೇ ?

ಶ್ರೀ ಎಸ್. ಆರ್ ಬೊಮ್ಮಾಯಿ (ಕಂದಾಯ ಸಚಿವರು).—

ಅ) ಹೌದು.

ಆ) ಮಂಜೂರಿದಾರರು ೧೯೫೬ನೇ ಸಾಲಿನಿಂದ ೧೯೬೩ನೇ ಸಾಲಿನವರೆಗೆ ಜಮೀನಿನ ಸ್ವಾಧೀನದಲ್ಲಿದ್ದರು.

ಇ) ಈ ಮೇಲ್ಕಂಡ ಜಮೀನಿನ ಕಂದಾಯವನ್ನು ಪಾವತಿ ಮಾಡದೇ ಇದ್ದುದರಿಂದ ಜಮೀನನ್ನು ಹರಾಜು ಮಾಡಿರುತ್ತದೆ. ಇವರ ನ್ಯಾಯಬದ್ಧ ಹಕ್ಕನ್ನು ಮೊಟಕು ಮಾಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಮಂಜೂರಿದಾರರು ದಿನಾಂಕ: ೬–೪–೧೯೮೪ ರಂದು ಹರಿಜನ/ಗಿರಿಜನ ಭೂಮಿ ಪುರ್ ಭಾರೆ, ನಿಷ್ಪಿದ್ಧ ಕಾಯಿದೆಯನ್ವಯ ಅರ್ಜಿಯನ್ನು ಸಲ್ಲಿಸಿರುತ್ತಾರೆ.